ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) 2004–05ನೇ ಸಾಲಿನಲ್ಲಿ ರಾಜ್ಯದಲ್ಲಿ ಸಾಮಾಜಿಕ, ಶೈಕ್ಷಣಿಕ ಜಾತಿವಾರು ಸಮೀಕ್ಷೆಯನ್ನು ಮಾಡುವ ಸಲುವಾಗಿ ಒಟ್ಟಾರೆ 1.00 ಕೋಟಿ ರೂ.ಗಳನ್ನು ಕರ್ನಾಟಕ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುತ್ತದೆ.

ಆ) 2004–05ನೇ ಸಾಲಿನಲ್ಲಿ ಈ ಸಮೀಕ್ಷೆಗಾಗಿ ಕೇಂದ್ರ ಸರ್ಕಾರವು ಒಟ್ಟಾರೆಯಾಗಿ ರೂ. 21.05 ಕೋಟಿಗಳನ್ನು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ.

ಇ) – ಇಲ್ಲ –

ಈ) ರಾಜ್ಯಾದ್ಯಂತ ಕೈಗೊಳ್ಳಲು ಉದ್ದೇಶಿಸಿರುವ ಜಾತಿವಾರು ಮನೆ ಮನೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗಾಗಿ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಸ್ತ್ರೀ ಶಕ್ತಿ ಸ್ವಸಹಾಯ ಮತ್ತು ಭಾಗ್ಯಲಕ್ಷ್ಮಿ ಬಾಂಡ್‌ಗಳು

922 (1294) ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗ ಪಟ್ಟಣ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯಲ್ಲಿ ಬರುವ ಮಕ್ಕಳ ಸಂಖ್ಯೆ ಎಷ್ಟು? ಪ್ರತಿ ವಿಧಾನಸಭಾ ಕ್ಷೇತ್ರದ ವಿವರ ಒದಗಿಸುವುದು;

ಆ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 2007–08 ಮತ್ತು 2008–09ನೇ ಸಾಲುಗಳಲ್ಲಿ ಹುಟ್ಟಿದ ಸುಮಾರು 200 ಕ್ಕಿಂತ ಹೆಚ್ಚು ಮಕ್ಕಳಿಗೆ ಪ್ರಯೋಜನ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಯಾವಾಗ ಈ ಮಕ್ಕಳಿಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಿಸಲಾಗುತ್ತದೆ;

ಈ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಇರುತ್ತವೆ (ವಿವರ ಒದಗಿಸುವುದು);

ಉ) ಆ ಪೈಕಿ ಸರ್ಕಾರದ ಸಹಾಯಧನ ಪಡೆದ ಸಂಘಗಳು ಯಾವುವು (ವಿವರ ಒದಗಿಸುವುದು); ಹಾಗಿದ್ದಲ್ಲಿ, ಎಷ್ಟು ಗುಂಪುಗಳು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿವೆ; ಅವುಗಳ ಚಟುವಟಿಕೆಗೆ ಮಾರುಕಟ್ಟೆ ಸೌಲಭ್ಯ ಹಾಗೂ ಸಹಾಯಧನ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ಹೊಸದಾಗಿ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸುವುದು ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು; ಇದುವರೆವಿಗೂ ಗುಂಪುಗಳನ್ನು ರಚನೆ ಮಾಡದಿರುವುದಕ್ಕೆ ಸಮಸ್ಯೆಗಳು ಏನಾದರೂ ಇವೆಯೇ; ಅವು ಯಾವುವು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯಲ್ಲಿ ಇಲ್ಲಿಯವರೆಗೆ 7,20,562 ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಒದಗಿಸಿದೆ. ಪ್ರತಿ ವಿಧಾನಸಭಾ ಕ್ಷೇತ್ರದ ವಿವರವನ್ನು ಸಂಬಂಧಪಟ್ಟ ಜಿಲ್ಲೆಗಳಿಂದ ಪಡೆದು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) 2007–08, 08–09ನೇ ಸಾಲಿನಲ್ಲಿ ಜನಿಸಿದ ಮಕ್ಕಳಿಗೆ ಬಾಂಡ್ ವಿತರಣೆ ಮಾಡುವುದು ಬಾಕಿಯಿದ್ದು, ಹಣ ಬಿಡುಗಡೆಯಾದಂತೆ ಬಾಕಿ ಯಿರುವ ಫಲಾನುಭವಿಗಳಿಗೆ ಬಾಂಡ್ ವಿತರಿಸಲು ಕ್ರಮ ವಹಿಸಲಾಗುವುದು.

ಇ) ಹಣ ಬಿಡುಗಡೆಯಾದಂತೆ ಬಾಂಡ್‌ಗಳನ್ನು ವಿತರಿಸಲು ಕ್ರಮ ವಹಿಸಲಾಗುವುದು.

ಈ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 704 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ರಚನೆಯಾಗಿರುತ್ತವೆ. ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಉ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ರಚನೆಯಾಗಿರುವ 704 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಸರ್ಕಾರದಿಂದ ಸುತ್ತುನಿಧಿ, ತರಬೇತಿ ಮತ್ತು ಕಿಟ್ ಸಾಮಗ್ರಿಗಳನ್ನು ಒದಗಿಸಲಾಗಿರುತ್ತದೆ. ಎಲ್ಲಾ ಗುಂಪುಗಳು ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಗುಂಪುಗಳ ಚಟುವಟಿಕೆಗೆ ಹಾಗೂ ಮಾರುಕಟ್ಟೆ ಸೌಲಭ್ಯಕ್ಕಾಗಿ ವಸ್ತು ಪ್ರದರ್ಶನ ಮಾರಾಟ ಮೇಳ ನಡೆಸಲು ವ್ಯವಸ್ಥೆ ಮಾಡಲಾಗಿದೆ. ತಾಲ್ಲೂಕು ಸ್ತ್ರೀಶಕ್ತಿ ಭವನ/ಮಾರುಕಟ್ಟೆ ಮಳಿಗೆಯನ್ನು ನಿರ್ಮಿಸಲು ರೂ.15.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ.

ಊ) ಪರಿಶೀಲಿಸಲಾಗುತ್ತಿದೆ.

ಅನುಬಂಧ-1

ವಿಧಾನ ಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1294

ಭಾಗ್ಯಲಕ್ಷ್ಮಿ ಯೋಜನೆಯಡಿ 2006 ರಿಂದ ಫೆಬ್ರವರಿ 2010 ರ ವರೆಗೆ ಫಲ ಪಡೆದುಕೊಂಡಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ.

ಕ್ರ. ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ				ಒಟ್ಟು
		2006-07	2007-08	2008-09	2009-10	
1	ಬಾಗಲಕೋಟೆ	8758	2689	13450	7312	32209
2	ಬೆಂಗಳೂರು (ಪ)	13475	1993	19476	2438	37382
3	ಬೆಂಗಳೂರು (ಗ್ರಾ)	4186	1123	4899	2316	12523
4	ರಾಮನಗರ	5300	1957	5486	2006	14749
5	ಬೆಳಗಾಂ	17510	6453	32694	11614	68271
6	ಬಳ್ಳಾರಿ	7847	0	14321	10054	32222
7	ಬೀದರ್	7316	1750	5828	5615	20508
8	ಬಿಜಾಪುರ	12837	0	16349	7453	36639
9	ಚಾಮರಾಜನಗರ	4035	826	6953	538	12352
10	ಚಿಕ್ಕಮಗಳೂರು	4481	0	5541	1700	11722
11	ಚಿತ್ರದುರ್ಗ	9250	2471	8523	3276	23520
12	ದಕ್ಷಿಣ ಕನ್ನಡ	2976	1320	1654	1387	7237
13	ದಾವಣಗೆರೆ	9637	3751	10033	9819	33240
14	ಧಾರವಾಡ	7990	1860	7498	1691	19039
15	ಗದಗ	6458	1557	7940	2680	18635
16	ಗುಲ್ಬರ್ಗ	16191	5802	14987	19884	56864
17	ಹಾಸನ	7027	2432	10587	4393	24439
18	ಹಾವೇರಿ	9958	3466	12347	4677	30448
19	ಕೊಡಗು	839	521	1697	1158	4215
20	ಕೋಲಾರ	5241	1696	8150	3278	18365
21	ಚಿಕ್ಕಬಳ್ಳಾಪುರ	4759	1257	5305	2980	14301
22	ಕೊಪ್ಪಳ	6153	0	8737	2378	17268
23	ಮಂಡ್ಯ	8379	3905	11958	4322	28564
24	ಮೈಸೂರು	10694	4071	16455	4550	35770
25	ರಾಯಚೂರು	9724	0	14345	50	24119
26	ಶಿವಮೊಗ್ಗ	7107	596	9034	6047	22784
27	ತುಮಕೂರು	16746	4088	14093	5511	40438
28	ಉಡುಪಿ	2356	886	3556	1096	7894
29	ಉತ್ತರ ಕನ್ನಡ	5448	1516	6968	1913	14845
	ಒಟ್ಟು	232676	57986	297764	132136	720562

ವಿಶೇಷ: 2006-07ನೇ ಸಾಲಿನ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯು 2007-08ನೇ ಸಾಲಿಗೆ ಬಿಡುಗಡೆಗೊಳಿಸಿರುವ ರೂ.72.00 ಕೋಟಿ ಹಣಕ್ಕೆ ಎದುರಾಗಿ ಫಲಾನುಭವಿಗಳಿಗೆ ವಿತರಣೆಯಾಗಿರುವ ಚಾಂಪ್‌ಗಳ ಮಾಹಿತಿಯನ್ನು ಸಹ ಒಳಗೊಂಡಿರುತ್ತದೆ.